ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳು 1962ರಲ್ಲಿಯೇ ಪ್ರಕಟವಾಗಿದ್ದು, 1985, 1987, 1988, 1992, 1994 ಹಾಗೂ 1997 ರಲ್ಲಿ ತಿದ್ದುಪಡಿ ಮಾಡಿ ಅಂತಿಮಗೊಳಿಸಿದ ವೃಂದ ಮತ್ತು ನೇಮಕಾತಿ ನಿಯಮಾವಳಿಗಳು ಜಾರಿಯಲ್ಲಿವೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶಿಕ್ಷಕರಿಗೆ ನೀಡಿರುವ ತರಬೇತಿ

704 (751) ಶ್ರೀ ಎ.ಎಸ್.ಗುರುಸ್ವಾಮಿ (ಚಾಮುಂಡೇಶ್ವರಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಸೆಕೆಂಡರಿ ಹಂತದವರೆಗೆ ಪರ್ಸನಾಲಿಟಿ ಡೆವೆಲಪ್‌ಮೆಂಟ್, ಲೀಡರ್ ಶಿಪ್ ಡೆವೆಲಪ್‌ಮೆಂಟ್ ಮೆಮೊರಿ ಡೆವಲಪ್‌ಮೆಂಟ್ ಮುಂತಾದ ಪ್ರಮುಖ ವಿಷಯಗಳ ಬೋದನೆ ಮತ್ತು ಅನುಷ್ಠಾನಕ್ಕೆ ಶಿಕ್ಷಕರಿಗೆ ನೀಡಿರುವ ತರಬೇತಿ ಏನು?

2. ಇದನ್ನು ಮಕ್ಕಳಲ್ಲಿ ಬೆಳೆಸಲು ಯಾವ ಕ್ರಮ ಹಾಕಿಕೊಳ್ಳಲಾಗಿದೆ?

3. ಯಾವಾಗ ಜಾರಿಗೊಳಿಸಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

1. ಸೇವಾನಿರತ ಶಿಕ್ಷಕರಿಗೆ ಪ್ರೌಢಶಿಕ್ಷಣ ಹಂತದಲ್ಲಿ ವಿಷಯಾಧಾರಿತ ತರಬೇತಿಗಳನ್ನು ನೀಡಲಾಗುತ್ತಿದೆ. ಇಲ್ಲಿ ನಮೂದಿಸಿದ ಪ್ರಮುಖ ವಿಷಯಗಳ ಭೋದನೆಗೆ ಸಂಬಂಧಿಸಿದಂತೆ ವೃತ್ತಿ ಪೂರ್ವ ತರಬೇತಿಯಲ್ಲಿ ಶಿಕ್ಷಕರನ್ನು ತರಬೇತಿಗೊಳಿಸಲಾಗುತ್ತದೆ.

2. ಈ ಅಂಶಗಳನ್ನು ಅಳವಡಿಸಲು ರಾಷ್ಟ್ರೀಯ ಶಿಕ್ಷಣ ನೀತಿ 1986 ರಲ್ಲಿರುವ 10 ಕೋರ್ ಲಿಮೆಂಟ್ಸ್ ಮತ್ತು 84 ಮೌಲ್ಯಗಳನ್ನು ಆಧರಿಸಿ ಅಭ್ಯಾಸ ಕ್ರಮ ಹಾಗೂ ಪಠ್ಯ ಪುಸ್ತಕಗಳನ್ನು ತಯಾರಿಸಲಾಗಿದೆ. ಇದರಿಂದ ಮಕ್ಕಳಲ್ಲಿ ವ್ಯಕ್ತಿತ್ವ ಬೆಳವಣಿಗೆ, ಸ್ಮರಣ ಶಕ್ತಿ ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸಬಹುದು.

3. 1986 ರ ಶಿಕ್ಷಣ ನೀತಿಯಂತೆ 1992-93 ನೇ ಸಾಲಿನಿಂದ ಪರಷ್ಕೃತ ಪಠ್ಯವಸ್ತು ಜಾರಿಯಲ್ಲಿದೆ.

ಗ್ರಾಮೀಣ ಗ್ರಂಥಾಲಯಕ್ಕೆ ಪತ್ರಿಕೆ ಸರಬರಾಜು

705 (755) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ): ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಳೇಯದಾಗಿರುವ ಹಾಗೂ ಖರ್ಚಾಗದ ದಿನಪತ್ರಿಕೆಗಳನ್ನು ಪತ್ರಿಕಾ ಸಂಪಾದಕ ವರ್ಗದವರು ನಿರ್ಮಾಣ ವೆಚ್ಚಕ್ಕೆ ನೀಡಲು ಒಪ್ಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಹೌದಾದರೆ, ಈ ಪತ್ರಿಕೆಗಳನ್ನು ಗ್ರಾಮೀಣ ಗ್ರಂಥಾಲಯಕ್ಕೆ ಸರಬರಾಜು ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ;

ಆ) ಈ ಯೋಜನೆಯನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು?

ಶ್ರೀ ಬಾಬುರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ) ಇಲ್ಲ, ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯತಿಯ ಲೋಪ ದೋಷಗಳು

706 (778) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ನಿಯಮ ಅನುಷ್ಠಾನಕ್ಕೆ ಬಂದ ಮೇಲೆ ಕಂಡು ಬಂದಿರುವ ಲೋಪದೋಷಗಳೇನು; ಇಂತಹ ಲೋಪದೋಷಗಳನ್ನು ಗುರುತಿಸಿ ಅಧ್ಯಯನ ಮಾಡಲಾಗಿದೆಯೆ?

ಆ) ಈ ಲೋಪದೋಷಗಳ ನಿವಾರಣೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಇ) ಈ ಪದ್ಧತಿಯ ನೀತಿಯಲ್ಲಿ ಬದಲಾವಣೆ ತರುವ ಇಚ್ಛೆ ಸರ್ಕಾರಕ್ಕೆ ಇದೆಯೆ?

ಈ) ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆಯೆ?

ಉ) ಗ್ರಾಮ, ಜಿಲ್ಲಾ ಪಂಚಾಯತ್ ವ್ಯವಸ್ಥೆ ಬದಲು ಬೇರೆ ವ್ಯವಸ್ಥೆ ಕಲ್ಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):-

ಅ) ಈ ಬಗ್ಗೆ ಕರ್ನಾಟಕ ಪಂ.ರಾಜ್ ಅಧಿನಿಯಮ 1993ರ ಉಪಬಂಧಗಳಲ್ಲಿ ಕಂಡುಬರುವ ಲೋಪದೋಷಗಳನ್ನು ಕುರಿತು ಅಧ್ಯಯನ ಮಾಡಿ ವರದಿ ಸಲ್ಲಿಸಲು ಸರ್ಕಾರವು ದಿನಾಂಕ 25-8-95ರಲ್ಲಿ ಶ್ರೀ ಪಿ.ಆರ್. ನಾಯಕ್ ಇವರ ನೇತೃತ್ವದಲ್ಲಿ ತಜ್ಞರ ಸಮಿತಿಯೊಂದನ್ನು ರಚಿಸಿ ಈ ಕಾರ್ಯವನ್ನು ವಹಿಸಿಕೊಡಲಾಗಿತ್ತು.

ಆ) ತಜ್ಞರ ಸಮಿತಿಯು ಲೋಪದೋಷಗಳನ್ನು ಕುರಿತು ಅಧ್ಯಯನ ಮಾಡಿ ಕೆಲವು ಶಿಫಾರಸ್ಸುಗಳೊಂದಿಗೆ ತನ್ನ ವರದಿಯನ್ನು ಮಾರ್ಚ್ 1996 ರಂದು ಸರ್ಕಾರಕ್ಕೆ ಸಲ್ಲಿಸಿತು. ಈ ಶಿಫಾರಸ್ಸುಗಳನ್ವಯ ಅಧಿನಿಯಮದ ಲೋಪದೋಷಗಳನ್ನು ಸರಿಪಡಿಸಲು ಸರ್ಕಾರವು ಕರ್ನಾಟಕ ಪಂ.ರಾಜ್ (3 ನೇ ತಿದ್ದುಪಡಿ) ಅಧಿನಿಯಮ 1997 ನ್ನು ಜಾರಿಗೆ ತರಲಾಯಿತು.